ಆಯೋಗ ಏನು ಇದೆ, ಅದನ್ನು ಶಿಫಾರಸ್ಸು ಮಾಡಿದ್ದಾರೆ. ಸರ್ಕಾರ ಪರಿಶೀಲನೆಯಲ್ಲಿ ಇದೆ. ಆದಷ್ಟು ಬೇಗ ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ತೆಲುಗು ಗೌಡರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರೆ ಈಗೇನು 30-32 ಪರ್‌ಸೆಂಟ್ ಇದೆಯೋ, ಆ ಜನಸಂಖ್ಯೆ ಕೂಡ ಒಂದೂವರೆ ಎರಡು ಲಕ್ಷ ಇರುವುದರಿಂದ ಆಗ ಹಿಂದುಳಿದ ವರ್ಗದ ಮೀಸಲಾತಿಯನ್ನೂ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಈಗ ಸರ್ಕಾರಕ್ಕೆ ವರದಿ ಬಂದಿದೆ. ಅದನ್ನು ನಾವು ಪರಿಷ್ಕರಣೆ ಮಾಡುತ್ತಿದ್ದೇವೆ. ಅದು ಸಚಿವ ಸಂಪುಟದ ಮುಂದೆ ಹೋಗುತ್ತದೆ. ಅದು ಅಂತಿಮವಾಗಿ ತೀರ್ಮಾನವಾದ ಮೇಲೆ ಕಾರ್ಯರೂಪಕ್ಕೆ ಬಂದೇ ಬರುತ್ತದೆ. ವರದಿ ಬಂದಿದೆ. ಪರಿಷ್ಕರಣೆ ನಡೆಯುತ್ತಿರಬಹುದು. ಗುರುಸ್ವಾಮಿಯವರು ಚಾಮರಾಜನಗರದಲ್ಲಿ ಇರುವ ಜನಾಂಗದ ಬಗ್ಗೆ ಪ್ರಶ್ನೆ ಕೇಳಿದರು, ಆ ಜನಾಂಗದ ಪ್ರಶ್ನೆ ಇಲ್ಲಿ ಇಲ್ಲ. ಅದು ಇಲ್ಲದೇ ಇರುವುದರಿಂದ ಇಲ್ಲಿ ಹೇಳುವುದು ಕಷ್ಟವಾಗುತ್ತದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಯ ಮಂಜೂರಾತಿ

290 (3622) ಶ್ರೀಮತಿ ಅನುಸೂಯಮ್ಮ ನಟರಾಜ್ ಕೆ.ವಿ. (ಚಿಕ್ಕಬಳ್ಳಾಪುರ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ನಿರುದ್ಯೋಗಿಗಳಿದ್ದು ಸಮಸ್ಯೆ ಪರಿಹಾರವಾಗುವಂತೆ ಯಾವುದಾದರೂ ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ಸಣ್ಣ ಕೈಗಾರಿಕೆಗಳನ್ನು ರಾಜ್ಯ ಸರ್ಕಾರದಿಂದ ನೇರವಾಗಿ ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸುವವರಿಗೆ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಹೊಸ ಕೈಗಾರಿಕಾ ನೀತಿಯ ಪ್ರಕಾರ ನೀಡಲಾಗುತ್ತಿದೆ. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 2000-2001 ನೇ ಸಾಲಿನಲ್ಲಿ 67 ಸಣ್ಣ ಪ್ರಮಾಣದ ಕೈಗಾರಿಕೆಗಳು ನೊಂದಣಿಯನ್ನು ಪಡೆದಿದ್ದು, ರೂ.185.72 ಲಕ್ಷ ಬಂಡವಾಳವನ್ನು ತೊಡಗಿಸಿದ್ದು 260 ಮಂದಿಗೆ ಉದ್ಯೋಗಾವಕಾಶ ದೊರೆತಂತಾಗಿದೆ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :— ಮಾನ್ಯ ಅಧ್ಯಕ್ಷರೇ, ನಮ್ಮ ಚಿಕ್ಕಬಳ್ಳಾಪುರದಲ್ಲಿ ಅನೇಕ ವಿದ್ಯಾಸಂಸ್ಥೆಗಳಿವೆ. 1,65,000 ರಷ್ಟು ಜನಸಂಖ್ಯೆ ಇದ್ದು 45 ಸಾವಿರ ವಿದ್ಯಾವಂತರಿದ್ದಾರೆ. ಅದರಲ್ಲಿ ಹತ್ತು ಜನ ಯುವಕರು, ಹತ್ತು ಜನ ಯುವತಿಯವರಿಗೆ ಮಾತ್ರ ಕೆಲಸ ಸಿಗುತ್ತದೆ. ಆದರೆ ಇನ್ನು ಕೆಲವರು ವಿದ್ಯಾವಂತರ ಸಿಗಲಿಲ್ಲವೆಂದು ಹೇಳಿ ಲೋನ್ ಕೊಡುವುದೇ ತುಂಬಾ ಕಡಿಮೆಯಾಗಿದೆ. ಅದರೂ 50 ಜನರಿಗೆ ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆನಲ್ಲಿ ಮತ್ತೆ ಪಿಎಂಆರ್‌ವೈನಲ್ಲಿ ಕೆಲಸ ದೊರಕುತ್ತದೆ. ಇನ್ನೂ ಕೆಲವರು ಇದೇ ರೀತಿ ಎಸ್‌ಎಸ್‌ಎಲ್‌ಸಿ ಪಾಸಾದರರು, ಫೇಲ್ ಆದವರು ಪೇಪರ್ ಹಾಕುವುದು, ಹಾಲನ್ನು ಮಾರುವುದು, ಈ ರೀತಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡೇ ಇದ್ದಾರೆ. ನಮ್ಮ ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರದಲ್ಲಿ ಜನ್ಮ ತಾಳಿದ್ದಾರೆ. ಅನೇಕ ಕಾರ್ಖಾನೆಗಳನ್ನು ದೇಶವಿದೇಶಗಳಲ್ಲಿ ಮಾಡಿಕೊಟ್ಟಿದ್ದಾರೆ. ಆದರೆ ನಮ್ಮ ಚಿಕ್ಕಬಳ್ಳಾಪುರದಲ್ಲಿ ಯಾವುದೊಂದು ಕಾರ್ಖಾನೆಯೂ ಸ್ಥಾಪನೆಯಾಗಿಲ್ಲ. ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದ ಮುದ್ದೇನಹಳ್ಳಿಯಲ್ಲಿ ಐದು ಕೊಠಡಿಗಳು ಇದೆ.

ಅಧ್ಯಕ್ಷರು :— ಡಿಮ್ಯಾಂಡ್ಸ್ ಬಂದಾಗ ಅದರ ಬಗ್ಗೆ ಮಾತನಾಡಿ. ಈಗ ಸಪ್ಲಿಮೆಂಟ್ರಿ ಪ್ರಶ್ನೆಯನ್ನು ಕೇಳಿ. ಅಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಯಾಗಬೇಕು ಎಂದು ಹೇಳಿ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :— ಅಲ್ಲಿ ಸಣ್ಣ ಕೈಗಾರಿಕಾ ಕಾರ್ಖಾನೆಯೊಂದನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು :— ಅಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಯನ್ನು ಪ್ರಾರಂಭಮಾಡಲು ಏರ್ಪಾಟು ಮಾಡಿ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಸದಸ್ಯೆಯರು ಕೇಳಿರತಕ್ಕ ಪ್ರಶ್ನೆಗೆ ಕೈಗಾರಿಕಾ ಉದ್ಯಮಗಳನ್ನು ಸರ್ಕಾರ ನೇರವಾಗಿ ಸ್ಥಾಪನೆ ಮಾಡುವುದಿಲ್ಲ. ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದವರಿಗೆ ಪ್ರೋತ್ಸಾಹ, ಸಹಾಯ ಸೌಲಭ್ಯಗಳನ್ನು, ರಿಯಾಯಿತಿಗಳನ್ನು ನೀಡುತ್ತೇವೆ. ಈಗಾಗಲೇ ಅಲ್ಲಿ 2000-01 ಇಸವಿಯಲ್ಲಿ 67 ಕೈಗಾರಿಕಾ ಯೂನಿಟ್‌ಗಳು 186 ಲಕ್ಷ ರೂಪಾಯಿಗಳ ಬಂಡವಾಳ ಹೂಡಿಕೆಯೊಂದಿಗೆ ಪ್ರಾರಂಭ ಆಗಿದೆ. ಆಲ್ಲಿ 260 ಜನ ಇವತ್ತು ಕೆಲಸ ಮಾಡುತ್ತಿದ್ದಾರೆ ಮತ್ತು ಹೊಸ ಕೈಗಾರಿಕಾ ಪಾಲಿಸಿ ಪ್ರಕಾರ ಅಲ್ಲಿ ಉದ್ಯಮಗಳನ್ನು ಸ್ಥಾಪನೆ ಮಾಡುವವರಿಗೆ ನಾವು ರಿಯಾಯಿತಿ ಮತ್ತು ಸವಲತ್ತುಗಳನ್ನು ಕೊಡುತ್ತೇವೆ. ಅವರು ಹೇಳಿದ ಹಾಗೆ ನಿರುದ್ಯೋಗೀ ಪದವಿಧರರಿಗೆ ಪಿಎಂಆರ್‌ವೈನಲ್ಲಿ ಕೂಡ ಅವಕಾಶ ಇದೆ. "ವಿಶ್ವದಲ್ಲಿ" ಕೂಡ ಉದ್ಯೋಗಕ್ಕಾಗಿ ತರಬೇತಿ ಮಾಡುವ ಒಂದು ಅವಕಾಶ ಇದೆ. ಅದಕ್ಕೆ ಅವರ

ಕ್ಷೇತ್ರದ ಜನ ಮುಂದೆ ಬಂದರೆ ಅಂಥವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇವೆನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಶ್ರೀಮತಿ ಕೆ.ವಿ. ಅನಸೂಯಮ್ಮ ನಟರಾಜನ್ :— ಮಾನ್ಯ ಅಧ್ಯಕ್ಷರೆ, ಅವರು ಕೈಗಾರಿಕೆಯಲ್ಲಿ ಸುಮಾರು 260 ಜನಕ್ಕೆ ಕೆಲಸ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ಅದು ಕಾರ್ಯಗತಕ್ಕೆ ಬಂದಿಲ್ಲ. ಹಾಗೂ ಪಿಎಂಆರ್‌ವೈನಲ್ಲಿ ಸುಮಾರು 70 ಜನರಿಗೆ ಉದ್ಯೋಗಾವಕಾಶ ಕೊಡುತ್ತಾರೆ ಅಷ್ಟೇ. ಇಲ್ಲಿ ಸುಮಾರು ವಿದ್ಯಾ ಸಂಸ್ಥೆಗಳು ಇವೆ. ನಮ್ಮ ಚಿಕ್ಕಬಳ್ಳಾಪುರದಲ್ಲಿ ಪಿಯುಸಿ ಇದೆ. ಸಿಪಿಎಡ್ ಇದೆ. ಬಿಎಡ್ ಇದೆ, ಫಾರ್ಮಸಿ ಇದೆ ಡಿಪ್ಲೊಮಾ ಇದೆ. ಅನೇಕ ವಿದ್ಯಾವಂತರು ಇದ್ದಾರೆ. ಸುಮಾರು 200-300 ಜನಕ್ಕೆ ಮಾತ್ರ ಅನುಕೂಲ ಆಗುತ್ತಿದೆ. ಮಿಕ್ಕ ಜನರಿಗೆ ವಿಶ್ವೇಶ್ವರಯ್ಯನವರ ಜನ್ಮಸ್ಥಳದಲ್ಲಿ ಒಂದು ರೇಷ್ಮೆಯ ಐದು ಕೊಠಡಿಯ ಕಾರ್ಖಾನೆ ಆಗಿ ನಿಂತು ಹೋಗಿದೆ. ಅದನ್ನು ಮೊದಲು ನಡೆಸುತ್ತಿದ್ದರು. ಈಗ ಯಾವುದಾದರೂ ತಕ್ಷಣ ಒಂದು ಕಾರ್ಖಾನೆ ನಡೆಸುವುದಕ್ಕೆ ಅವಕಾಶವನ್ನು ಸಂಬಂಧಪಟ್ಟ ಸಚಿವರು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು :— ರೇಷ್ಮೆಗೆ ಸಂಬಂಧಪಟ್ಟ ಹಾಗೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಇದೆಯಲ್ಲಾ, ಇಲ್ಲಿ ರೇಷ್ಮೆ ಜಾಸ್ತಿ ಬೆಳೆಯುತ್ತಾರೆ. ರೇಷ್ಮೆಗೆ ಸಂಬಂಧಪಟ್ಟ ಹಾಗೆ ಯಾವುದಾದರೂ ಕಾರ್ಖಾನೆ ಪ್ರಾರಂಭ ಮಾಡಲು ಏರ್ಪಾಡು ಮಾಡಿ. ಇದಕ್ಕೆ ಉತ್ತರ ಹೇಳಿ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ರೇಷ್ಮೆ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ :— ಒಂದೇ ಒಂದು ಪ್ರಶ್ನೆ ಏನೆಂದರೆ ಇವರು ಹೊಸ ಕೈಗಾರಿಕಾ ನೀತಿ ಪ್ರಕಾರ ಒಂದು ಹೇಳುತ್ತಿದ್ದಾರೆ. ಆ ಹೊಸ ಕೈಗಾರಿಕಾ ನೀತಿ ಏನು ಎನ್ನುವುದನ್ನು ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು :— ಈಗ ಬೇಡ, ಇನ್ನೊಂದು ದಿವಸ ಕೇಳಿ, ಈಗ ಸಮಯ ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ :— ಹೊಸ ಕೈಗಾರಿಕಾ ನೀತಿ ಏನು ಎಂದು ಅವರು ವಿವರಣೆ ನೀಡಲಿ.

ಅಧ್ಯಕ್ಷರು :— ಅವರು ವಿವರಣೆ ನೀಡಲು ಶುರು ಮಾಡಿದರೆ 20 ನಿಮಿಷ ಆಗುತ್ತದೆ. ನಮಗೆ ಈಗ ಸಮಯ ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ :— ಶಾರ್ಟ್ ಆಗಿ ರಿಪ್ಲೈ ಕೊಡಲಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಇದು ಪ್ರಶ್ನೋತ್ತರ ವೇಳೆ. ನೀವು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಆಗ ಹೇಳಿ. ದಯವಿಟ್ಟು ಬೇಡ.

ಶ್ರೀ ಎ.ಎಸ್. ಗುರುಸ್ವಾಮಿ :— ಇದು ನನ್ನ ವಿಚಾರ ಅಲ್ಲ. ಅವರು ಉತ್ತರದಲ್ಲಿಯೇ ಹೇಳಿದ್ದಾರೆ. ಹೊಸ ಇಂಡಸ್ಟ್ರೀಯಲ್ ಪಾಲಿಸಿ ಪ್ರಕಾರ ಎಂದು ಹೇಳುತ್ತಾರಲ್ಲಾ ಯಾವುದು ಹೊಸ ಇಂಡಸ್ಟ್ರೀಯಲ್ ಪಾಲಿಸಿ? ದಯವಿಟ್ಟು ಒಂದು ಸೆಂಟೆನ್ಸ್ ಹೇಳುವುದಕ್ಕೆ ಹೇಳಿ.

ಅಧ್ಯಕ್ಷರು :— ನಾನು ಸಮಯ ಇಲ್ಲ ಎಂದು ಹೇಳುತ್ತಿದ್ದೇನೆ. ನೀವು ಪ್ರತಿ ಒಬ್ಬರೂ ಹೊಸ ರೀತಿ ಪ್ರಶ್ನೆ ಕೇಳಿ, ಆದರ ಮೇಲೆ ಮತ್ತೆ ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತಾ ಹೋದರೆ ಏನು ಉಪಯೋಗ? ನೀವು ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎ.ಎಸ್. ಗುರುಸ್ವಾಮಿ :— ಹೊಸ ಕೈಗಾರಿಕಾ ನೀತಿ ಏನು ಎನ್ನುವುದು ಎಲ್ಲರಿಗೂ ಗೊತ್ತಾಗಲಿ. ನನ್ನ ಒಬ್ಬನಿಗೇ ಅಲ್ಲ.

ಅಧ್ಯಕ್ಷರು :— ಈಗ ನಮ್ಮ ಹತ್ತಿರ ಇನ್ನೂ 8 ಪ್ರಶ್ನೆಗಳು ಇವೆ. 20 ನಿಮಿಷ ಸಮಯ ಇದೆ. ನಾನು ಹೇಗೆ ಮ್ಯಾನೇಜ್ ಮಾಡಲಿ ಎಂಬುದನ್ನು ತಾವೇ ಹೇಳಿ. ನೀವು ನನ್ನನ್ನು ಅರ್ಥ ಮಾಡಿಕೊಳ್ಳಿ. ನೀತಿ ಹೇಳುವುದಕ್ಕೆ ಹೋದರೆ ಇನ್ನೂ 20 ನಿಮಿಷ ಸಮಯ ಆಗುತ್ತದೆ. ದಯವಿಟ್ಟು ಬೇಡಿ. ಇನ್ನೊಂದು ದಿವಸ ಮಾತನಾಡಿ.

ದಿ. ಡಿ. ದೇವರಾಜು ಅರಸ್ ಸಂಶೋಧನಾ ಸಂಸ್ಥೆ

291 (3174) ಶ್ರೀ ರೇವಣ್ಣ ಹೆಚ್.ಎಂ. (ಮಾಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾನ್ಯ ಮುಖ್ಯಮಂತ್ರಿಗಳಾದ ದಿ. ಡಿ. ದೇವರಾಜ ಅರಸುರವರ ಸಂಶೋದನಾ ಸಂಸ್ಥೆಯು ಯಾವಾಗ ಅಸ್ತಿತ್ವಕ್ಕೆ ಬಂದಿತ್ತು;

ಆ) ಈ ಸಂಸ್ಥೆಯ ಧ್ಯೇಯೋದ್ದೇಶಗಳಾವುವು;

ಇ) ಈ ಸಂಸ್ಥೆಗೆ ಕಳೆದ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ.

ಈ) ಯಾವ ಯಾವ ಉದ್ದೇಶಕ್ಕಾಗಿ ಎಷ್ಟೆಷ್ಟು ಹಣ ಈವರೆಗೆ ಖರ್ಚಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ದಿನಾಂಕ: 20-8-1993 ರಂದು.